ಬರ್ಲಿನ್ಸ್ ಒಲಿಂಪಿಕ್ಸ್‌ನಲ್ಲಿ ಜಗತ್ತಿನ ಅತಿವೇಗದ ಓಟಗಾರನಾಗಿ ಹೊರ ಹೊಮ್ಮಿದ ಹಾಗೂ ಒಂದೇ ಕೂಟದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಜಯಿಸಿದ ಜೆಸ್ಸಿ ಓವೆನ್ಸ್ ಸಾಧನೆಯನ್ನು ನಿರೂಪಿಸುವ 'ರೇಸ್' 134 ನಿಮಿಷಗಳ ಚಿತ್ರ.

ಜೆಸ್ಸಿ ಓವೆನ್ಸ್ ಪಾತ್ರಕ್ಕೆ ಕೆನಡಾದ ನಟ ಸ್ಟೀಪನ್ಸ್ ಜೇಮ್ಸ್ ಜೀವ ತುಂಬಿ ಪ್ರತಿಯೊಂದು ದೃಶ್ಯದಲ್ಲಿಯೂ ಜೆಸ್ಸಿ ಓಟ–ಹೋರಾಟವನ್ನು ಮರು ಸೃಷ್ಟಿಸಿದ್ದಾರೆ. ತನ್ನ ಒಲಿಂಪಿಕ್ಸ್ ವೈಫಲ್ಯವನ್ನು ಮರೆತು ಕ್ರೀಡಾ ಜಗತ್ತಿಗೆ ಜೆಸ್ಸಿ ಎಂಬ ಕಪ್ಪುವಜ್ರ ಹೊಳೆಯುವಂತೆ ಮಾಡಿದ ಕೋಚ್ ಪಾತ್ರದಲ್ಲಿ ಜಾಸನ್ ಸುಂಡೇಕೀಸ್ ತಮ್ಮ ಅಭಿನಯದಿಂದ ನೋಡುಗರ ಮನಗೆಲ್ಲುತ್ತಾರೆ.

ಬರ್ಲಿನ್ ಕ್ರೀಡಾಂಗಣವನ್ನು ಮರುಸೃಷ್ಟಿಸಿ ಅಚ್ಚುಕಟ್ಟಾಗಿ ಚಿತ್ರ ಸಿದ್ಧಗೊಳ್ಳುವಂತೆ ಮಾಡಿದ್ದು, ಇದನ್ನು ತಮ್ಮ ತಾಂತ್ರಿಕ ಕೌಶಲ್ಯದಿಂದ ಸೆರೆಹಿಡಿದು ಕೊಟ್ಟವರು ಛಾಯಾಗ್ರಾಹಕ ಪೀಟರ್ ಲೆವಿ.

ಕಪ್ಪು ಜನರ ಕಷ್ಟ ಕೋಟಲೆಗಳನ್ನು ಯಥಾವತ್ತಾಗಿ ಬಿಂಬಿಸುತ್ತ, ನಾಲ್ಕು ಚಿನ್ನದ ಪದಕಗಳ ಮೂಲಕ ದೇಶದ ಹಾಗೂ ಕ್ರೀಡಾಲೋಕದ ಗೌರವ ಹೆಚ್ಚಿಸಿದ ಕ್ರೀಡಾಪಟು ಜೆಸ್ಸಿ ಓವೆನ್ಸ್. ಇಂತಹ ಪ್ರತಿಭಾವಂತ ಓಟಗಾರನ ಬಗೆಗೆ ಆಗಿನ ಅಮೆರಿಕದ ಪ್ರಭುತ್ವ ತೋರಿದ ಅನಾದರವನ್ನು 'ರೇಸ್' ಚಿತ್ರಿಸುತ್ತದೆ. ಜೊತೆಗೆ ನಾಜಿ ಅಹಂಕಾರವನ್ನು ಮೆಟ್ಟಿ ನಿಂತು ಸಾಧನೆ ಮಾಡಿದ ಶ್ರೇಷ್ಠ ಕ್ರೀಡಾಪಟು ಜೆಸ್ಸಿ ಓವೆನ್ಸ್‌ರ ಮಹತ್ವದ ಮೂರು ವರ್ಷಗಳ ಬದುಕನ್ನು ಕೂಡ ಅಪೂರ್ವ ರೀತಿಯಲ್ಲಿ ಕಟ್ಟಿಕೊಡುತ್ತದೆ.

---

## ಎನ್. ಜಗನ್ನಾಥ ಪ್ರಕಾಶ್

ಹತ್ತು ಹಲವು ವಿಷಯಗಳ ಆಸಕ್ತ ಜಗನ್ನಾಥ್ ಪ್ರಕಾಶ್ ಅವರು ಜೆ.ಪಿ ಎಂದೇ ಅವರ ವಲಯದಲ್ಲಿ ಪರಿಚಿತರು. ನಿರಂತರವಾಗಿ 3–4 ದಶಕಗಳ ಕಾಲ ಪತ್ರಿಕೆಗಳಿಗೆ ಬರೆಯುತ್ತ ಬಂದಿರುವ ಅವರು ಕೋಲಾರದವರು. ಅವರು ಕೆಲ ಕಾಲ ಪತ್ರಕರ್ತರಾಗಿದ್ದಯೂ ಕೆಲಸ ಮಾಡಿದ್ದುಂಟು. ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಅಧಿಕಾರಿಯಾಗಿ ಅವರು ಆಯೋಜಿಸಿದ ಚಿತ್ರೋತ್ಸವಗಳು, ರೂಪಿಸಿದ ಹಲವಾರು ಯೋಜನೆಗಳು ಜನರ ಮೆಚ್ಚುಗೆ ಪಡೆದಿವೆ. ವಾರ್ತಾ ಇಲಾಖೆ, ಚಲನಚಿತ್ರ ಅಕಾಡೆಮಿಯಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿ ಪ್ರಸ್ತುತ ವೃತ್ತಿಯಿಂದ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ಸಿರಿಸಂಪುಟ', 'ಶಿಲಾ ಕಾವ್ಯ', 'ತಲೆಮಾರು' ಅವರ ಪುಸ್ತಕಗಳಾಗಿವೆ.